† ಶ್ರೀ ಬಿ. ಎಂ. ಪಾಟೀಲ್ :-ಡಿವಿಜನಲ್ ಕಮಿಷನರ್ ಮಂಜೂರಾತಿ ಕೊಟ್ಟಿದ್ದು ೧೫ನೇ ಫೆಬ್ರುವರಿ ೧೯೬೯ರಲ್ಲಿ.

ಶ್ರೀ ಬಿ. ಭಾಸ್ಕರಶೆಟ್ಟಿ :— ಅಲ್ಲಿನ ಜನಗಳಿಂದ ಟ್ಯಾಕ್ಸಿ ನಿಲ್ಲಿಸುವುದಕ್ಕೆ ಅಲ್ಲಿ ಸ್ಥಳವಿಲ್ಲವೆಂದು ಮನವಿ ಬಂದಿದೆಯೇ ?

ಶ್ರೀ ಬಿ. ಎಂ. ಪಾಟೀಲ್.— ಮೊದಲು ಅಲ್ಲಿ ಟ್ಯಾಕ್ಸಿ ಸ್ಟ್ಯಾಂಡ್ ಆಗಿತ್ತು ನಿಜ. ಟ್ಯಾಕ್ಸಿ ಸ್ಟಾಂಡಾಗಿದ್ದರೂ ಅದನ್ನು ಉಪಯೋಗ ಮಾಡುತ್ತಿರಲಿಲ್ಲ. ಅದರಿಂದ ನಗರ ಸಭೆಗೆ ಒಂದು ಆದಾಯ ಬರುತ್ತದೆ. ಆದ್ದರಿಂದ ಅಲ್ಲಿ ಕಟ್ಟಡದ ಅವಶ್ಯಕತೆ ಇದೆಯೆಂದು ಡಿವಿಜನಲ್ ಕಮಿಷನರ್ ಅವರು ಒಪ್ಪಿಗೆ ಕೊಟ್ಟಿದ್ದಾರೆ

ಶ್ರೀ ಬಿ. ಭಾಸ್ಕರಶೆಟ್ಟಿ :—ಅಲ್ಲಿ ಪುರಸಭೆ ಅಧ್ಯಕ್ಷರು ಕಮ್ಯೂನಿಸ್ಟ್ ಆಗಿರುವುದರಿಂದ ಅವರ ಅಧಿಕಾರವನ್ನು ಹೇಗಾದರೂ ಮಾಡಿ ಕೆಳಗಿನ ಮಟ್ಟಕ್ಕೆ ತರಬೇಕೆಂದು ಅವರು ಅಧಿಕಾರದಲ್ಲಿರುವಾಗ ೧೫ನೇ ಫೆಬ್ರುವರಿ ೧೯೬೯ರಲ್ಲಿ ಅದು ಅಸ್ತಿತ್ವಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಅದೇ ದಿವಸ ತಮ್ಮ ಕಮಿಷನರ್ ಅವರು ಮಂಜೂರಾತಿಗೆ ಕಳುಹಿಸಿದ್ದಾರೆ. ಅವರು ಪುರಸಭೆಯವರನ್ನು ಏಕೆ ಕೇಳಿ ಈ ಕೆಲಸವನ್ನು ಮಾಡಲಿಲ್ಲ.

ಶ್ರೀ ಬಿ. ಎಂ. ಪಾಟೀಲ್ :—ಪುರಸಭೆ ಆಗ ಫಂಕ್ಷನ್ ಮಾಡುತ್ತಿರಲಿಲ್ಲ. ಅದನ್ನು ಸಂಬಂಧಪಟ್ಟ ಅಧಿಕಾರಿಗಳು ಡಿವಿಜನಲ್ ಕಮಿಷನರ್ ಅವರಿಗೆ ಶಿಫಾರಸು ಮಾಡಿದ್ದಾರೆ. ಅದಕ್ಕೆ ಕಾನೂನು ಪ್ರಕಾರ ಸರ್ಕಾರದವರು ಒಪ್ಪಿಗೆ ಕೊಟ್ಟಿದ್ದಾರೆ.

ಶ್ರೀ ಬಿ. ಎಂ. ಇದಿನಬ್ಬ ;—ಡಿವಿಜನಲ್ ಕಮಿಷನರ್ ಕಾನೂನು ಪ್ರಕಾರ ಸಾಂಕ್ಷನ್ ಕೊಟ್ಟಿದ್ದಾರೆಯೇ ಎರಡನೆಯದು, ಟ್ಯಾಕ್ಸಿ ನಿಲ್ದಾಣಕ್ಕೆ ಸ್ಟ್ಯಾಂಡ್‌ಗೆ ಜಾಗವಿಲ್ಲವೆಂದು ಹೇಳುವ ಕಾಲದಲ್ಲಿ ಅವರಿಗೆ ಬೇರೆ ಏರ್ಪಾಡುಗಳನ್ನು ಮಾಡಿಕೊಡುತ್ತೀರಾ

ಶ್ರೀ ಬಿ ಎಂ, ಪಾಟೀಲ್ :—ಡಿವಿಜನಲ್ ಕಮಿಷನರ್ ಅವರು ಕಾನೂನು ಪ್ರಕಾರ ಕೊಟ್ಟಿದ್ದಾರೆ. ಅಲ್ಲಿ ಟ್ಯಾಕ್ಸಿ ಸ್ಟ್ಯಾಂಡ್ ಬಹಳ ಅವಶ್ಯಕತೆ ಇದೆಯೆಂದು ಹೇಳಿದಾಗ ಪುರಸಭೆಯವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ ;— ಟ್ಯಾಕ್ಸಿ ಸ್ಟ್ಯಾಂಡ್ ಹೆಸರಿನಲ್ಲಿ ಕಟ್ಟಿಸಿದಂತ ಟ್ಯಾಕ್ಸಿ ಸ್ಟಾಂಡನ್ನು ಉಪಹಾರಕ್ಕಾಗಿ ಪರಿವರ್ತನ ಮಾಡುವುದಕ್ಕೆ ಹೆಲ್ತ್ ಡಿಪಾರ್ಟ್‌ಮೆಂಟಿನವರು ಒಪ್ಪಿಗೆ ಕೊಟ್ಟಿದ್ದಾರೆಯೇ ಹಿಂದೆ ಅಲ್ಲಿ ಟಾಕ್ಸಿ ಸ್ಟ್ಯಾಂಡ್ ಅಥವಾ ಷೆಡ್ ಇತ್ತು. ಆದರೂ ಹೆಚ್ಚಿಗೆ ಟ್ಯಾಕ್ಸಿಗಳು ಬರುತ್ತಿರಲಿಲ್ಲ ಅದರ ಸಲುವಾಗಿ ಡಿವಿಜನಲ್ ಕಮಿಷನರ್ ಕಡೆಗೆ ಈಗ ಕ್ಯಾಂಟೀನ್ ಅವಶ್ಯಕತೆ ಇದೆ ಎಂಬುದನ್ನು ಶಿಫಾರಸು ಮಾಡಿದರು ಅದಕ್ಕೆ ಡಿವಿಜನಲ್ ಕಮಿಷನರ್ ಅದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ.

ಶ್ರೀ ಅಜೀಜ್ ಸೇಟ್ :— ಮಾನ್ಯ ಶ್ರೀ ಭಾಸ್ಕರಶೆಟ್ಟಿಯವರು ಹೇಳುವ ಮಾತಿಗೆ ಮಾನ್ಯತೆ ಕೊಡಿ. ಸಂಬಂಧಪಟ್ಟ ಫೈಲನ್ನು ತರಿಸಿ ವಿಷಯಗಳನ್ನು ತಿಳಿದುಕೊಂಡು ಸೂಕ್ತ ತಿದ್ದುಪಡಿ ಉತ್ತರ ಕೊಡುತ್ತೀರಾ?

ಶ್ರೀ ಬಿ. ಎಂ. ಪಾಟೀಲ್ :—ಈಗ ತಿದ್ದುಪಡಿಮಾಡುವಂತ ಪ್ರಮೇಯವಿಲ್ಲ. ಪುರಸಭೆಗೆ ಹೆಚ್ಚಿನ ಆದಾಯ ಬರುತ್ತಿದೆ. ಆ ಕಡೆಯವರು ಇದು ಬಹಳ ಅವಶ್ಯಕವೆಂದು ರೆಪ್ರಸೆಂಟ್ ಮಾಡಿದ್ದಾರೆ. ಡಿವಿಜನಲ್ ಕಮಿಷನರ್ ಅವರ ಅಭಿಪ್ರಾಯದ ಪ್ರಕಾರ ಒಂದು ತೀರ್ಮಾನಕ್ಕೆ ಬಂದು ಒಂದು ನಿರ್ಧಾರ ಮಾಡಿದ್ದೇವೆ.

ಶ್ರೀ ಬಿ. ಭಾಸ್ಕರಶೆಟ್ಟಿ :—ಈ ವಿಚಾರದಲ್ಲಿ ಮಾನ್ಯ ಸಭಾ ಸದಸ್ಯರು ಮತ್ತು ಪುರಸಭಾಧ್ಯಕ್ಷರು ಮನವಿ ಸಲ್ಲಿಸಿದ್ದಾರೆ. ನಿಜವಾಗಿ ಅಲ್ಲಿ ಟ್ಯಾಕ್ಸಿ ಸ್ಟ್ಯಾಂಡ್‌ನಲ್ಲಿ ಟ್ಯಾಕ್ಸಿ ನಿಲ್ಲುಂತಿ ತ್ತೆಂಬುದು ಮಾನ್ಯ ಶ್ರೀ ಇದಿನಬ್ಬನವರಿಗೆ ಗೊತ್ತಿದೆ. ಟ್ಯಾಕ್ಸಿ ಸ್ಟಾಂಡ್ ಬೇಕು ಎಂದು ಪ್ರಾರ್ಥನೆ ಮಾಡಿರುವುದು ನಿಜವಲ್ಲವೆ?

ಶ್ರೀ ಬಿ. ಎಂ. ಪಾಟೀಲ್ :—ಅಲ್ಲಿ ಎಷ್ಟು ವರ್ಷಗಳವರೆಗೆ ಈ ಕಂಟ್ರಾಕ್ಟ್ ಕೊಟ್ಟಿದ್ದಾರೊ ಅದರಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ಟ್ಯಾಕ್ಸಿ ಸ್ಟ್ಯಾಂಡ್ ಬೇಕೆಂದು ಪುರಸಭೆಯವರ ಅಭಿಪ್ರಾಯವಿದ್ದರೆ ಅದು ಅವರಿಗೆ ಸಂಬಂಧಪಟ್ಟುದು.

ROAD MARGIN TO BE MAINTAINED FOR CONSTRUCTING BUILDINGS

382. SRI C. K. RAJAIAH SHETTY (Chicknaikanahalli).—

Will the Minister of State for Municipal Administration be pleased to state.—

(*a*) the classification of Banasandra-Yelandu Road (Ore carrying Road).

(*b*) the road margin that is expected to be prohibited from the centre of such roads in Municipal limits for construction of new buildings at Chicknaikanahally Town.

(*c*) the distance between the centre of theroad and both the ends of Taluk Agricultural Marketing Society building under construction.

(*d*) whether it is a fact that from Nehru Circle upto Municipal boundary towards south 10 feet distance up to Municipal building from road margin is maintained since 30 years in Chicknaikanahalli Town limits,

(*e*) the special reason with the Government for discontinuing this tradition for this building in particular ?

SRI B. M. PATIL (Minister of State for Municipal Administration).—

(*a*) It is a state fund road.

(*b*) 30 ft.

(*c*) 38 ft.

(*d*) No.

(*e*) Does not arise in view of reply to clause (d).

SRI C. K. RAJAIAH SHETTY.—Sir, by this question, I wanted to ascertain whether it was A orB or C. class road according to P W D classification. May I know whether it is A class road or otherwise ?

ಶ್ರೀ ಬಿ. ಎಂ. ಪಾಟೀಲ್.—ಅಲ್ಲಿನ ಪುರಸಭಾಧ್ಯಕ್ಷರು ಡೆಪ್ಯುಟಿ ಕಮಿಷನರ್ ಮುಖಾಂತರ ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸಿದ್ದಾರೆ. ಇದು ಸ್ಟೇಟ್ ಫಂಡ್ ರೋಡಿನಲ್ಲಿ ಬರುತ್ತದೆಂದು ತಿಳಿಸಿದ್ದಾರೆ.

SRI C.K. RAJAIAH SHETTY.-Many residents of that place when they applied for licences, were given an endorsement that right from the road centre, there should be clear space of 80 feet. There are so many endorsements to that effect. I will pass them on to you for your persual. I want to know why only in that particular case, there is

a concession given when all others are required to construct building leaving 80 feet from the middle of the road ? It is a road on which Government ha sspent Rs. 45 lakhs and it is an important ore-carrying road. When such is the case, why exemption is given only to one building ?

ಶ್ರೀ ಬಿ. ಎಂ. ಪಾಟೀಲ್ .—ಮಾನ್ಯ ಸದಸ್ಯರ ಹತ್ತಿರ ಏನಾದರೂ ಕಾಗದಗಳು ಇದ್ದರೆ ಅವನ್ನು ಕಳುಹಿಸಿದರೆ ಪರಿಶೀಲಿಸುತ್ತೇನೆ. ಈಗ ಡೆಪ್ಯುಟಿ ಕಮಿಷನರ್ ವರದಿಯ ಪ್ರಕಾರ ಈ ರಸ್ತೆ ಸ್ಟೇಟ್ ಫಂಡ್ ರೋಡಿನಲ್ಲಿ ಬರುತ್ತದೆ. ಯಾವುದಾದರೂ ಒಂದು ಕಟ್ಟಡವನ್ನು ಕಟ್ಟಬೇಕಾದರೆ ೩೦ ಅಡಿಗಳ ದೂರದಲ್ಲಿ ಕಟ್ಟಬೇಕೆಂದು ಒಂದು ವರದಿಯನ್ನು ಕಳುಹಿಸಿದ್ದಾರೆ.

SRI C. K. RAJAIAH SHETTY.–I wanted to ascertain from the PWD whether it is State highway or B Class or C class road ? The Minister for PWD would have given that information. I do not know how this question is referred to the Minister for Municipal Administration. There are many more such things. I do not know why such exemptions are given. I request you to hold over the question.

MR. SPEAKER.—The Hon. Member may pass on to ask all the papers with the covering letter Now Q No. 411. Sri Thammanna is permitted to put it on behalf of Sri L. Srikantaiah.

ACQUISITION OF NISHAD BAGH AND ITS ADJACENT PLACES IN MYSORE CITY

411. SRI G. THAMMANNA (Kunigal) [on behalf of SRI SRIKANTAIH (Nanjangud)].—

Will the Minister of State for Municipal Administration be pleased to state.—

(*a*) whether the Government has given its approval to the acquisition of Nishad Bagh, Mysore City (belonging to the Palace) and another piece of land adjacent to the above belonging to a private person and who had purchased the same from the Palace on the recommendation of the City Improvement Trust Board and City Municipality, Mysore;

(*b*) whether the Government has now directed the concerned authorities to drop the acquisition of proceedings.

(*c*) whether it is true that the City Improvement Trust Board is anxious to acquire the same for the purpose of locating memorials to Mahatma Gandhi and Kasturba Gandhi ?

SRI B. M. PATIL (Minister of State for Municipal Administration):—

(*a*) Yes.

(*b*) No.

(*c*) Yes.